# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

## ಸಿ.ಸಿ. ನಂ.32/2019

CW-5/PW-3

| | | |
|---|---|---|
| ಹೆಸರು | ಃ- | ಗಿರೀಶ್ |
| ತಂದೆ ಹೆಸರು | ಃ- | ಗಂಗಾಧರಯ್ಯ |
| ವಯಸ್ಸು | ಃ- | 23 ವರ್ಷ |
| ವೃತ್ತಿ | ಃ- | ಹೋಟೆಲ್‌ನಲ್ಲಿ ಕೆಲಸ |
| ವಾಸ ಸ್ಥಳ | ಃ- | ಕಾಕರಾಮನಹಳ್ಳಿ |
| ದಿನಾಂಕ | ಃ- | 28.11.2024. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಆದರೆ 2018 ರಲ್ಲಿ ನಾನು ರಾಮನಗರ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರು ಎರಡು ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ತನ್ನ ಸಹಿಯನ್ನು ಎರಡು ದಾಖಲೆಗಳಲ್ಲಿ ಗುರುತಿಸಿದ್ದು, ಅವುಗಳು ಸ್ಥಳ ಮತ್ತು ಅಮಾನತು ಪಂಚನಾಮೆಗಳಾಗಿದ್ದು, ಸ್ಥಳ ಮಹಜರನ್ನು ಈಗ **ನಿಪಿ-2** ಎಂದು ಹಾಗೂ ಅದರಲ್ಲಿನ ನನ್ನ ಸಹಿಯನ್ನು ನಿಪಿ-**2(ಎ)** ಎಂದು, ಅಮಾನತು ಪಂಚನಾಮೆಯನ್ನು **ನಿಪಿ-3** ಎಂದು ಹಾಗೂ ಅದರಲ್ಲಿನ ನನ್ನ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಿರುತ್ತೇನೆ. ನಿಪಿ-2 ಮತ್ತು ನಿಪಿ-3 ರ ವಿಚಾರ ನನಗೆ ತಿಳಿದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕ **06.07.2018** ರಂದು ಪೊಲೀಸರು ನನ್ನನ್ನು ಬಿಡದಿ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಅಲ್ಲಿ **1** ನೇ ಆರೋಪಿ ರಾಕೇಶ್ ಗೌಡನನ್ನು ತೋರಿಸಿ ಆತನನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಿದ್ದು, ಆತನು ಶಿವನೇಗೌಡದೊಡ್ಡಿ ಗ್ರಾಮದ ಬಾಳೆತೋಟದ ಬಳಿನಡೆದುಕೊಂಡು ಹೋಗುತ್ತಿದ್ದ ಒಬ್ಬ ಮಹಿಳೆಯ ಬಳಿ ನಾನು ಹಾಗೂ **2** ನೇ ಆರೋಪಿ ಚಂದ್ರಶೇಖರ್ ರವರು ಹೋಗಿ ವಿಳಾಸ ಕೇಳುವ ನೆಪದಲ್ಲಿ ಆಕೆಯ ಕುತ್ತಿಗೆಯಲ್ಲಿದ್ದ ಚಿನ್ನದ ಮಾಂಗಲ್ಯದ ಸರವನ್ನು ಸುಲಿಗೆ ಮಾಡಿದ್ದು, ನಂತರ ಅದನ್ನು ಶಿವಣ್ಣ ಎಂಬುವವರಿಗೆ ಮಾರಾಟ ಮಾಡಿದ್ದಾಗಿ ತಿಳಿಸಿ ನನ್ನ ಜೊತೆ ಬಂದರೆ ಕೃತ್ಯ ಸ್ಥಳವನ್ನು ಹಾಗೂ ಶಿವಣ್ಣರವರ ಮನೆಯನ್ನು ತೋರಿಸುವುದಾಗಿ ಒಪ್ಪಿಕೊಂಡಿರುತ್ತಾರೆಂದು ನನಗೆ ತಿಳಿಸಿ, ನನ್ನನ್ನು ಪಂಚರಾಗಿ ಕೋರಿರುತ್ತಾರೆ ಎಂದರೆ ಸರಿಯಲ್ಲ. ನಂತರ **1** ನೇ ಆರೋಪಿ ಕರೆದುಕೊಂಡು ಹೋದಂತೆ ಶಿವನೇಗೌಡದೊಡ್ಡಿ ಗ್ರಾಮದ ಬಾಳೆತೋಟದ ಬಳಿ ಹೋಗಿದ್ದು ಆರೋಪಿ ಇದೇ ಸ್ಥಳದಲ್ಲಿ ನಾನು ಸುಲಿಗೆ ಮಾಡಿದ್ದು ಎಂದು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ **10.00** ರಿಂದ **10.45** ರವರೆಗೆ ನಿಪಿ-**2** ರಂತೆ ಪೊಲೀಸರು ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

**2.** ಅದೇ ದಿನ ನಂತರ **1** ನೇ ಆರೋಪಿಯು ತುಂಬೇನಹಳ್ಳಿ ಗ್ರಾಮಕ್ಕೆ

ಕರೆದುಕೊಂಡು ಹೋಗಿ ಶಿವಣ್ಣರವರ ಮನೆಯನ್ನು ತೋರಿಸಿ ಮಾರಾಟ ಮಾಡಿದ ಚಿನ್ನದ ಮಾಂಗಲ್ಯದ ಸರವನ್ನು ಹಾಜರುಪಡಿಸುವಂತೆ ಕೋರಿದ್ದು, ಸದರಿ ಶಿವಣ್ಣರವರು ಚಿನ್ನದ ಸರವನ್ನು ಹಾಜರುಪಡಿಸಿದ್ದು ಅದನ್ನು ಅಕ್ಕಸಾಲಿಗರಾದ ಚಾಸಾ-6 ರವರು ಪರಿಶೀಲಿಸಿ, ಚಿನ್ನದ ಮಾಂಗಲ್ಯದ ಸರವೆಂದು ದೃಢೀಕರಿಸಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಪೊಲೀಸರು ಬೆಳಗ್ಗೆ 11.45 ರಿಂದ 12.45 ರವರೆಗೆ ನಿಪಿ-3 ರಂತೆ ಅಮಾನತು ಪಂಚನಾಮೆ ಜರುಗಿಸಿ ಅಮಾನತುಪಡಿಸಿಕೊಂಡು, ಅಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿಗಳ ಪರಃ-

ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.